# ಶ್ರೀ ಉಪಮಾಕ ಕ್ಷೇತ್ರ ವಿಶೇಷಗಳು

**''ಕತಾ ವೇಂಕಟನಾಯಕಃ''**

ಶ್ಲೋ ಕ : ಏಕೇನ ಶಂಖ ಮಪರೇಣ ಕರೇಣ ಚಕ್ರಂ। ಅನ್ಯೇನ ಖಡ್ಗಮಿತರೇಣ ಧನಸ್ಸು ಬಾಣಂ॥
ವಾಮೇ ಶ್ರಿಯಂ ಪರೆಧರಂ ತುರಗಾಧಿರೂಢಂ। ಪಾಯಾತ್ಸಮಾಂ ಖಗನಗ ಸ್ಥಿತ ವೇಂಕಟೇಶಮ್॥

ಶ್ಲೋಕ : ಏಕ ಹಸ್ತಂ ಕಟಿಂಚೈವ ವಾಮೇ ಶಂಖಂ ಚ ನಿಕ್ಷಿಪೇತ।
ದಕ್ಷಿಣೇ ಚಕ್ರ ಹಸ್ತಂತು ಏಕಂ ವೈಕುಂಠ ಹಸ್ತಕಂ।
ಅಲರ್ ಮೆಲ್ಮಂಗ ಸಂಯುಕ್ತಂ ವೇಂಕಟೇಶ ಮಹಂ ಭಜೆ॥

1. ಶ್ರೀಮನ್ನಾರಯಣನು ಧರಿಸಿದ 10ನೇ ಅವತಾರವಾದ ಕಲ್ಕಿ ಅವತಾರದಲ್ಲಿ ಸ್ವಯಂಭುವು ಆಗಿ ಶಿಲೆಯ ರೂಪದಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿ ಈ ಕ್ಷೇತ್ರದಲ್ಲಿ ವಿರಾಜಮಾನರಾಗಿದ್ದಾರೆ.

2. ಶ್ರೀ ವೇಂಕಟೇಶ್ವರ ಸ್ವಾಮಿ ಅಶ್ವವಾಹನನಾಗಿ ಮೆಲಿನ ಷಡ್ಭುಜಗಳಲ್ಲಿ ನಾಲ್ಕು ಆಯುಧಗಳಿಂದ ಶ್ರೀ ಲಕ್ಷ್ಮೀ ಸಮೇತನಾಗಿ ಗರುಢ ಪರ್ವತದ ಮೇಲೆ ಶಾಲಿಗ್ರಾಮ ಶಿಲಿಯಲ್ಲಿ ವಿರಾಜಮಾನನಾಗಿದ್ದಾರೆ.

3. 108 ಶ್ರೀ ವೈಷ್ಣವರ ಅಭಿಮಾನ ಕ್ಷೇತ್ರಗಳಲ್ಲಿ ಇದು ಸಹ ಅತ್ಯಂತ ಪ್ರೀತಿಪಾತ್ರವಾದದ್ದು ಎಂದು ಕರೆಯಲಾಗುತ್ತದೆ.

4. ಈ ಕ್ಷೇತ್ರದಲ್ಲಿ ಶ್ರೀ ಸ್ವಾಮಿಯವರು ಉತ್ತರಾಭಿಮುಖವಾಗಿ ನೆಲಸಿರುವುದರಿಂದ ಎಲ್ಲಾ ದೇವಾಲಯಗಳಲ್ಲಿ ವರ್ಷಕ್ಕೆ ಒಂದು ದಿನ ಲಭಿಸುವ ಉತ್ತರ ದ್ವಾರ ದರ್ಶನ ಇಲ್ಲಿ ಮಾತ್ರ ಭಕ್ತರಿಗೆ ನಿತ್ಯವೂ ಲಭಿಸುವುದು.

5. ಶ್ರೀಸ್ವಾಮಿ ವಿಶ್ವದ ಮೂಲಿಯಲ್ಲಿ ಎಲ್ಲಿದ್ದರೂ ರಾತ್ರಿ ಸಮಯದಲ್ಲಿ(ಶಯನ) ವಿಶ್ರಾಂತಿ ಇಲ್ಲಿಯೇ.

6. ಶ್ರೀಸ್ವಾಮಿಗೆ ಪ್ರತಿಯೊಂದು ದೇವಾಲಯದಲ್ಲಿ ಜರುಗುವ ಪಂಚಾಮೃತ ಅಭಿಷೇಕವೂ ಈ ಕ್ಷೇತ್ರದಲ್ಲಿ ಮಾತ್ರ ಪ್ರತಿನಿತ್ಯವೂ ಜರುಗುವುದು.

7. ಶ್ರೀ ಸ್ವಾಮಿಗೆ ಉತ್ತರ ಆಂಧ್ರದಲ್ಲಿ ನೆಲಸಿರುವ ತಿಮ್ಮಪ್ಪವೆಂದೂ ಕರೆಯುವರು. ಆದ್ದರಿಂದ ತಿರುಪತಿಯಲ್ಲಿ ಜರುಗುವ ಬ್ರಹ್ಮೋತ್ಸವಗಳು ಮತ್ತು ಎಲ್ಲಾ ಉತ್ಸವಗಳು ಇಲ್ಲಿ ಪಾಂಚರಾತ್ರ ಆಗಮ ಶಾಸ್ತ್ರದ ಪ್ರಕಾರ ಶ್ರೀ ವೈಷ್ಣವ ಸಂಪ್ರಾದಯದ ಪ್ರಕಾರ ಜರುಗುವುದು. ಈ ವಿಧವಾಗಿ ಮತ್ತೇಲ್ಲಿಯೂ ಜರುಗುವುದಿಲ್ಲ, ಅದಕ್ಕೆ ತಿರುಪತಿಗೆ ಹೋಗಲು ಆಗದ ಭಕ್ತಜನ, ಇಲ್ಲಿಗೆ ಬಂದು ಈ ಸ್ವಾಮಿ ಕೈಂಕರ್ಯ ಗೈಯ್ದು ದರ್ಶಿಸಿ ಧನ್ಯರಾಗುತ್ತಾರೆ.

8. ಗರುತ್ಮಂತನ ತಪಸ್ಸಿಗೆ ಮೆಚ್ಚಿ ಆತನ ಕೋರಿಕೆಯ ಮೇರೆಗೆ ಗರುತ್ಮಂತನ ಮೇಲೆಯೇ ಸ್ವಾಮಿ ವಿರಾಜಿಸಿರುವುದರಿಂದ ಪರ್ವತವೂ ಸಹ ನೋಡಲು ಅದೇ ರೂಪದಲ್ಲಿ ಇರುವುದರಿಂದ ಈ ಕ್ಷೇತ್ರಕ್ಕೆ ಗರುಡಾಚಲ, ಗರುಡ ಪರ್ವತ ಮತ್ತು ಗರುಡಾದ್ರಿ ಎಂದು ಕರೆಯುವರು.

9. ಈ ಗರುಡ ಪರ್ವತದ ಕೆಳಗಿನ ಭಾಗದಲ್ಲಿ ಶ್ರೀ ಸೀತಾರಾಮ ಸಮೇತ ದಾಸಾಂಜನೆಯ ದೇವಾಲಯ ಇರುವುದು. ಇದಕ್ಕೆ ವಿರುದ್ಧವಾಗಿ ಶ್ರೀ ಶ್ರೀ ಶ್ರೀ ತ್ರಿದಂಡಿ ಶ್ರೀಮನ್ನಾರಾಯಣ ರಾಮಾನುಜ ದೊಡ್ಡ ಜೀಯರ ಸ್ವಾಮಿಗಳಿಂದ ಪ್ರತಿಷ್ಠಾಪಿಸಿದ 48ನೈ ರಾಮ ಸ್ಥೂಪ ಇರುವುದು.

10. ಈ ಗರುಡ ಪರ್ವತಕ್ಕೆ ಕೆಲಗಿನ ಪ್ರದೇಶದಲ್ಲಿ ಕ್ಷೇತ್ರಪಾಲಕನಾದ ಶ್ರೀ ಸಂತಾನ ಗೋಪಾಲಕೃಷ್ಣ ಸ್ವಾಮಿ ದೇವಾಲಯ ಅಲ್ಲಿ ಅವರ ಸಾನಿಧ್ಯದಲ್ಲಿಯೇ ಶ್ರೀದೇವಿ ಹಾಗೂ ಭೂದೇವಿ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿಯ ಉತ್ಸವರುರು ವಿರಾಜಿಸಿರುವುದು ಈ ದೇವಾಲಯದ ನಾಲ್ಕು ಕಡೆಗಳಲ್ಲಿ ಶ್ರೀ ಅಂಡಾಳ್ (ಗೋದಾದೇವಿ) ಅಮ್ಮನವರು, ನಮ್ಮಾಳ್ವರುಗಳು, ಶ್ರೀ ಭಗವದ್ರಾಮನುಜರು, ಶ್ರೀ ಮನವಾಲ ಮಹಾಮುನಿಗಳಿಗೆ ನಾಲ್ಕು ಉಪ ಆಲಯಗಳು ಇವೆ.

11. ಈ ಗರುಡ ಪರ್ವತದ ಎದುರಿನಲ್ಲಿ ಕೆಳಗಿನ ಭಾಗದಲ್ಲಿ 'ಬಂಧುರ' ಎಂಬ ಸರಸ್ಸು ಎಂಬ ಪುಷ್ಕರಣಿ ಇರುವುದು. ಇಲ್ಲಿ ಬ್ರಹ್ಮ, ನಾರದ ಮಹಾಋಷಿ, ಅದಿತಿ, ಕಶ್ಯಪ, ದಂಪತಿಗಳು ಈ ಪುಷ್ಕರಣಿಯಲ್ಲಿ ಸ್ನಾನಗೈದು ಯುಗಾಗಗಳಲ್ಲಿ ತಪಗೈದು ಶ್ರೀ ವೇಂಕಟೇಶ್ವರ ಸ್ವಾಮಿಯೇ ಪ್ರತಿಯೊಂದು ಯುಗಗಳಲ್ಲೂ ತಾವುಗಳೇ ಈ ಶ್ರೀ ಸ್ವಾಮಿ ತಾಯಿ ತಂದೆಗಳಾಗಿ ಜನ್ಮಿಸುವಂತೆ ಅನುಗ್ರಹ ಹೊಂದಿದರಂತೆ. ಆದ್ದರಿಂದ ಇಲ್ಲಿ ಶ್ರೀಸ್ವಾಮಿ ಸಂತಾನ ಫಲಪ್ರದಾತನಾಗಿ ಹೆಸರುವಾಸಿಯಾಗಿದ್ದಾರೆ. ಅದಕ್ಕೆ ಭಕ್ತರು ಸಂತಾನಕ್ಕಾಗಿ, ಇಲ್ಲಿ ಸ್ನಾನಮಾಡಿ, ಬೆಟ್ಟದ ಮೇಲೆ ಇರುವ ವೇಂಕಟನಾಥನಿಗೆ ಜರುಗುವ ಪಂಚಾಮೃತಾಭಿಷೇಕ ಸೇವೆಯಿಂದ ಕೃತಾರ್ಥರಾಗಿ, ತೀರ್ಥ ಪ್ರಸಾದಗಳನ್ನು ಸ್ವೀಕರಿಸಿದಲ್ಲಿ ಅವರ ಸಂತಾನ ಪ್ರಾಪ್ತಿಯಾಗುವುದು. ವೇಂಕಟನಾಥನ ಅಭೀಷೇಕಕ್ಕೆ ಮತ್ತು ಎಲ್ಲಾ ಪೂಜೆಗಳಿಗೂ ಈ ಪುಷ್ಕರಣಿ ನೀರನ್ನು ಉಪಯೋಗಿಸುವರು. ಈ ಪುಷ್ಕರಣಿಯ ಸ್ನಾನಮಾಡಿದರೆ ತಿರುಪತಿಉ ಪಾಪನಾಶನದಲ್ಲಿ ಸ್ನಾನಮಾಡಿದಂತ ಫಲ ಸಿಗುತ್ತದೆ. ಬ್ರಹ್ಮ ಹತ್ಯಾಪಾಪಗಳು ನಾಶವಾಗುತ್ತದೆ.

12. ಈ ಕ್ಷೇತ್ರದಲ್ಲಿ ಕೋರಿಕೆಗಳು ಸ್ವಾಮಿಗೆ ಭಿನ್ನಪಿಸಿ ಇಡೇರಿದ ನಂತರ ಕಾಲನಡಿಗೆಯಲ್ಲಿ ಬೆಟ್ಟಕ್ಕೆ ಮೇಲೆ ಏರಿ ಬರುವೆ ಎಂದು ಮನಸ್ಸಿನಲ್ಲಿ ನಿಶ್ಚಯಿಸಿದ ಆ ಕೋರಿಕೆ ತ್ವರಿತವಾಗಿ ನೆರವೇರುವುದು ಎಂಬುದು ಇಲ್ಲಿಯ ಜನರ ಪ್ರಗಾಢ ವಿಶ್ವಾಸ.

13. ಈ ಕ್ಷೇತ್ರದಲ್ಲಿ ಕರಿದಿನ ಅಂದರೆ (ಸಂಕ್ರಾತಿಯ ಮರುದಿನ) ವೇಂಕಟನಾಥನಿಗೆ ರಾಜುಧಿರಾಜನ ಅಲಂಕಾರದಿಂದ ಪುಣ್ಯ ಕೋಟಿ ವಾಹನದಲ್ಲಿ ಭಕ್ತಜನರೊಂದಿಗೆ ಒಡಗೂಡಿ ಗರುಡಾದ್ರಿ ಸುತ್ತ ಗಿರಿ ಪ್ರದಕ್ಷಿಣ ಮಾಡುತ್ತಾರೆ. ಎಲ್ಲಾ ದೇವಾಲಯಗಳಲ್ಲಿ, ಭಕ್ತರು ಮಾತ್ರ ಗಿರಿ ಪ್ರದಕ್ಷಿಣ ಗೈಯುತ್ತಾರೆ.

14. ಉಪಮಾಕ ಎಂದರೆ ಉಪಮಾನ ಇಲ್ಲದ್ದು (ತಿರುಗಿಲ್ಲದ್ದು) ಎಂದು ಇಂತಹ ಅಮೂಲ್ಯ ಕ್ಷೇತ್ರ ಮತ್ತೇಲ್ಲಿಯೂ ಕಾಣಿಸಲಾಗದು.

15. ಈ ಕ್ಷೇತ್ರದಲ್ಲಿ ಶಾಶ್ವತ ನೆತ್ಯ ಅನ್ನದಾನ ಯೋಜನೆ, ಗೋ ಸಂರಕ್ಷಣ ಯೋಜನೆ ಹಾಗೂ ದೇವಾಲಯ ಅಭಿವೃದ್ಧಿ ಯೋಜನೆ ಇರೆವವು. ಭಕ್ತರು ತಮಗೆ ತಿಳಿದು, ಯಥಾನಿಶಕ್ತಿ ದೇಣಿಗೆಗಳನ್ನು ಮೇಲಿನ ಯೋಜನೆಗಳಲ್ಲಿ ಸಲ್ಲಿಸಿ, ಆ ದೇವದೇವನ ಕೃಪಾಕಟಾಕ್ಷಕ್ಕೆ, ಅನುಗ್ರಹಕ್ಕೆ ಪಾತ್ರರಾಗಬೇಕು. ಅನ್‌ಲೈನನ ಸದುಪಾಯ ಸಹ ಒದಗಿಸಲಾಗಿದೆ. ಈ ಸದುಪಾಯಕ್ಕಾಗಿ www.upamakabalaji.com ವಿ-ಅಂಚೆಯನ್ನು ಸಂದರ್ಶಿಸಿ.

16. ಈ ಕ್ಷೇತ್ರದಲ್ಲಿಯೂ ಇನ್ನು ಅದ್ಭುತ ವಿಶೇಷಗಳಿಗಾಗಿ ''ಶ್ರೀ ಉಪಮಾಕ ಕ್ಷೇತ್ರ ಮಹತ್ಮ್ಯ'' ಎಂಬ ಪುಸ್ತಕವನ್ನು ಈ ಉಪಮಾಕ ಕ್ಷೇತ್ರದಲ್ಲಿ ಯಾವಗಲು, ಅಥವಾ ನಿಮ್ಮ ಹತ್ತಿರದ ವಿಶಾಲಾಂಧ್ರ ಬುಕ್ ಹೌಸನಲ್ಲಿ ಆಗಲಿ ಹೊಂದಬಹುದು. ಈ ಪುಸ್ತಕ ಎಲ್ಲಾ ಪ್ರಜೆಗಳಿಗೆ ನಿಲುಕುವಂತೆ, ಇರುವ ಉದ್ದೇಶ್ವದಿಂದ ಆಂಧ್ರ ರಾಷ್ಟ್ರದಲ್ಲಿ ಇರುವ ಎಲ್ಲಾ ಸರಕಾರಿ ಗ್ರಂಥಾಲಯಗಳಲ್ಲಿ ಇರಿಸಲಾಗಿದೆ. ಇಂಟರ್‌ನೆಟ್ ಸೌಕರ್ಯ ಇರುವವರು, ಈ ಪುಸ್ತಕವನ್ನು ಮೇಲೆ ತಿಳಿಸಿದ ವಿ-ಅಂಚೆನಿಂದ ಉಚಿತವಾಗಿ ಡೌನ್‌ಲೋಡ ಮಾಡಿಕೊಳ್ಳಬಹುದು.

17. ಈ ಕ್ಷೇತ್ರದ ಹತ್ತಿರದಲ್ಲಿ ಪುರಾತನ ದೇವಾಲಯವೊಂದು ಇರುವುದರಿಂದ ಸಮುದ್ರ ತೀರಕ್ಕೆ ಹತ್ತಿರವಾಗಿ ಇರುವುದರಿಂದಲೂ ಭಕ್ತರು ಬಾರಿ ಬಾರಿ ವೇಂಕಟೇಶನ ದರ್ಶನಕ್ಕೆ ಬರುತ್ತಾರೆ.

18. ಈ ಮಹಾ ಮಹಿಮಾನ್ವಿತ ಕ್ಷೇತ್ರವೂ ಅನ್ನವರದಿಂದ 40 ಕಿ.ಮೀ. ತುನಿ ಪಟ್ಟಣದಿಂದ 19 ಕಿ.ಮೀ. ದೂರದಲ್ಲಿದೆ. ಮತ್ತು ವಿಶಾಖಪಟ್ಟಣ ಹೋಗುವ ಮಾರ್ಗದಲ್ಲಿ (NH 5) ನಕ್ಕದಲ್ಲಿಗೆ 18 ಕಿ.ಮೀ. ದೂರದಲ್ಲಿ ಇರುವುದು ಇಲ್ಲಿಂದ ವಿಶಾಖಪಟ್ಟಣಕ್ಕೆ 85 ಕಿ.ಮೀ.ದೂರದಲ್ಲಿ ಇರುವುದು.


## ಶ್ರೀ ಶ್ರೀ ಶ್ರೀ ವೇಂಕಟೇಶ್ವರಸ್ವಾಮಿ ದೇವಸ್ಥಾನ - ಉಪಮಾಕ ಕ್ಷೇತ್ರ

ಉಪಮಾಕ ಗ್ರಾಮ, ನಕ್ಕಪಲ್ಲಿ ಮಂಡಲ, ವಿಶಾಖಪಟ್ಟಣ ಜಿಲ್ಲಾ, ಆಂಧ್ರಪ್ರದೇಶ.

ದೂ. : +9192476 20111, ವಿ-ಅಂಚೆ : www.upamakabalaji.com